ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೧**

# ಕರ್ನಾಟಕ ವಿಧಾನಸಭೆ

**ಹದಿನಾರನೇ ವಿಧಾನಸಭೆ**

**ನಾಲ್ಕನೇ ಅಧಿವೇಶನ**

**ಸೋಮವಾರ, ದಿನಾಂಕ: ೧೫ನೇ ಜುಲೈ, ೨೦೨೪**

---

**ಸಮೂಹ – 'A'**

೧. ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಮಾನ್ಯ ಲೋಕೋಪಯೋಗಿ ಸಚಿವರು

೩. ಮಾನ್ಯ ಕಂದಾಯ ಸಚಿವರು

೪. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

**ಭೂಮಾಪನ ಕಛೇರಿ ಪ್ರಾರಂಭ**

**ಶ್ರೀ ಬಾಬಾಸಾಹೇಬ್ ಪಾಟೀಲ್ (ಕಿತ್ತೂರು) –**

೧ (೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭೂಮಾಪನ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯನ್ನು ಚನ್ನಮ್ಮನ ಕಿತ್ತೂರಿನಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು ; ಈ ಕಛೇರಿ ಪ್ರಾರಂಭಿಸುವಲ್ಲಿ ವಿಳಂಬವಾಗಲು ಇರುವ ಕಾರಣವೇನು ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ಕಛೇರಿಗೆ ಮಂಜೂರಾದ ಹುದ್ದೆಗಳು ಎಷ್ಟು ; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಎಷ್ಟು ; ೨೦೧೬ರಲ್ಲಿ ಮಂಜೂರಾದ ಹುದ್ದೆಗಳನ್ನು ಸರ್ಕಾರ ಬೇರೆ ಕಡೆಗೆ ಸ್ಥಳಾಂತರ ಮಾಡಲು ಇರುವ ಕಾರಣವೇನು?

## ಹೊಸ ಬಸ್‌ಗಳನ್ನು ಒದಗಿಸುವುದು

**ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) –**

೨ (೬೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗದ ಬೈಲಹೊಂಗಲ ಬಸ್ ಘಟಕದಲ್ಲಿ ಎಷ್ಟು ಬಸ್‌ಗಳು ಇರುತ್ತವೆ ;

(ಆ) ಸರ್ಕಾರದ ನಿಯಮಗಳ ಪ್ರಕಾರ ಒಂದು ಬಸ್ ಎಷ್ಟು ಕಿ.ಮೀ. ಚಲಿಸಿದ್ದರೆ ಅದನ್ನು ನಿಷ್ಕ್ರಿಯ ವಾಹನ ಎಂದು ಪರಿಗಣಿಸಲಾಗುವುದು ;

(ಇ) ಬೈಲಹೊಂಗಲ ಘಟಕದಲ್ಲಿ ಎಷ್ಟು ವಾಹನಗಳು ನಿಯಮಕ್ಕಿಂತ ಹೆಚ್ಚಿನ ಕಿ.ಮೀ. ಚಲಿಸಿ ನಿಷ್ಕ್ರಿಯಗೊಂಡಿವೆ ;

(ಈ) ಈ ಘಟಕದಲ್ಲಿ ಕಾರ್ಯಕ್ಷಮತೆಯನ್ನು ಕಳೆದುಕೊಂಡ ವಾಹನಗಳನ್ನು ಕಾರ್ಯಾಚರಣೆ ಮಾಡುತ್ತಿರುವುದರಿಂದ ಬಸ್‌ಗಳು ಮಾರ್ಗ ಮಧ್ಯದಲ್ಲಿ ಕೆಟ್ಟು ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಕೂಡಲೇ ಈ ಬೈಲಹೊಂಗಲ ಬಸ್ ಘಟಕದಲ್ಲಿನ ನಿಷ್ಕ್ರಿಯಗೊಂಡ ವಾಹನಗಳನ್ನು ಬದಲಾಯಿಸಿ, ಹೊಸ ವಾಹನ ಒದಗಿಸಲು ಕ್ರಮ ವಹಿಸಲಾಗುವುದೇ?

## ವಸತಿ ಗೃಹಗಳು

**ಶ್ರೀ ದರ್ಶನ್ ಧ್ರುವನಾರಾಯಣ (ನಂಜನಗೂಡು) –**

೩ (೭೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನಂಜನಗೂಡು ವಿಧಾನಸಭಾ ಕ್ಷೇತ್ರದ ಹುಲ್ಲಹಳ್ಳಿ ಗ್ರಾಮದಲ್ಲಿರುವ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ವಸತಿಗೃಹಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಎಷ್ಟು ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿವೆ ; ಅವುಗಳನ್ನು ದುರಸ್ತಿಗೊಳಿಸಲಾಗುವುದೇ ಅಥವಾ ಅವುಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಾಣ ಮಾಡಲಾಗುವುದೇ ; (ಮಾಹಿತಿ ನೀಡುವುದು)

(ಆ) ಸದರಿ ವಸತಿ ಗೃಹಗಳ ದುರಸ್ತಿ ಅಥವಾ ಹೊಸದಾಗಿ ನಿರ್ಮಾಣ ಮಾಡದೇ ಇದ್ದಲ್ಲಿ, ಕಾರಣಗಳೇನು ;

(ಇ) ಸದರಿ ವಸತಿ ಗೃಹಗಳ ದುರಸ್ತಿ ಅಥವಾ ಹೊಸದಾಗಿ ನಿರ್ಮಿಸಲು ಸಾಧ್ಯವಾಗದೇ ಇದ್ದಲ್ಲಿ, ಅವುಗಳನ್ನು ತೆರವುಗೊಳಿಸಿ ಹುಲ್ಲಹಳ್ಳಿ ಗ್ರಾಮದಲ್ಲಿ ಸರ್ಕಾರದ ಅನ್ಯ ಇಲಾಖೆಯ ಕಛೇರಿ ಕಟ್ಟಡಗಳಿಗೆ ಜಾಗವನ್ನು ಹಸ್ತಾಂತರಿಸುವ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)

## ಮೀನುಗಾರಿಕೆಗೆ ಅನುಕೂಲ

**ಶ್ರೀ ಭರಮಗೌಡ ಅಲಗೌಡ ಕಾಗೆ (ಕಾಗವಾಡ) –**

೪ (೧೯೯) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆಯ ಕಾಗವಾಡ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೃಷ್ಣಾ ನದಿಯು ಹರಿಯುತ್ತಿದ್ದು, ಇಲ್ಲಿ ಮೀನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರವು ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ ;

(ಆ) ಮೀನುಗಾರರ ಜೀವನಕ್ಕೆ ಅನುಕೂಲವಾಗುವಂತೆ ಸರ್ಕಾರದ ವತಿಯಿಂದ ಎಷ್ಟು ಮನೆಗಳನ್ನು ನೀಡಲಾಗಿದೆ ;

(ಇ) ಕಳೆದ ೩ ವರ್ಷಗಳಿಂದ ಮೀನುಗಾರರಿಗೆ ಅನುಕೂಲವಾಗುವಂತೆ ನೀಡಿರುವ ಪರಿಕರಗಳು ಹಾಗೂ ಉತ್ತೇಜನಗಳು ಯಾವುವು? (ವಿವರ ಒದಗಿಸುವುದು)

## ಜಮೀನುಗಳ ಅನಧಿಕೃತ ಒತ್ತುವರಿ

**ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ) –**

೫ (೨೧೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಯಶವಂತಪುರ ಹೋಬಳಿಯ ಲಗ್ಗೆರೆ ಗ್ರಾಮದ ಸರ್ವೆ ನಂ. ೮/೧, ೯/೧, ೯/೨, ೯/೪, ೧೧ ಮತ್ತು ೧೨ರ ಕೊಳಗೇರಿ ಪ್ರದೇಶದ ಜಮೀನನ್ನು ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಕೊಳಗೇರಿ ಪ್ರದೇಶಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಅನಧಿಕೃತವಾಗಿ ಒತ್ತುವರಿ ಮಾಡಿರುವ ಜಮೀನನ್ನು ಪುನಃ ಮಂಡಳಿಗೆ ಹಿಂಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಅನಧಿಕೃತವಾಗಿ ಒತ್ತುವರಿ ಮಾಡಿರುವ ಖಾಸಗಿ ವ್ಯಕ್ತಿಗಳು ಮತ್ತು ಒತ್ತುವರಿ ಮಾಡಲು ಸಹಕರಿಸಿದ ಇಲಾಖಾ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

## ಭೂಮಾಪಕರ ಕೊರತೆ

**ಶ್ರೀ ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ) –**

೬ (೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಕಂದಾಯ ಇಲಾಖೆಯ ಅಧೀನದಲ್ಲಿ ಬರುವ ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಭೂಮಾಪಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೊರತೆಯಿರುವ ಭೂಮಾಪಕರ ನೇಮಕಾತಿಗಾಗಿ ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ;

(ಇ) ಯಾವ ಕಾಲಮಿತಿಯಲ್ಲಿ, ಕೊರತೆಯಿರುವ ಭೂಮಾಪಕರ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು; ಹಾಗಿದ್ದಲ್ಲಿ ಎಷ್ಟು ಭೂಮಾಪಕರ ನೇಮಕಾತಿಯನ್ನು ಮಾಡಲು ಸರ್ಕಾರ ಉದ್ದೇಶಿಸಿದೆ ;

(ಈ) ಇಲ್ಲದಿದ್ದಲ್ಲಿ, ಭೂಮಾಪಕರ ಕೊರತೆಯಿಂದಾಗಿ ರೈತರು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದನ್ನು ತಪ್ಪಿಸಲು ಕೊರತೆಯಿರುವ ಭೂಮಾಪಕರ ನೇಮಕಾತಿ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು? (ಸಂಪೂರ್ಣ ವಿವರ ನೀಡುವುದು)

## ಪರಿಹಾರ ನೀಡುವುದು

**ಶ್ರೀ ಅಶೋಕ್ ಕುಮಾರ್ ರೈ (ಪುತ್ತೂರು) –**

೭ (೮೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಲೋಕೋಪಯೋಗಿ ಇಲಾಖೆಯಿಂದ ರಸ್ತೆ ನಿರ್ಮಾಣ ಮಾಡುವಾಗ ಭೂ–ಸ್ವಾಧೀನವಾಗಿರುವ ರೈತರಿಗೆ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಪರಿಹಾರ ನೀಡಲಾಗುವುದು ;

(ಆ) ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿರುವ ಇಂತಹ ಪ್ರಕರಣಗಳ ಸಂಖ್ಯೆ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ಅನುದಾನ ಬಿಡುಗಡೆ

**ಶ್ರೀ ಸಿದ್ದು ಸವದಿ (ತೇರದಾಳ) –**

೮ (೯೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತೇರದಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಬಕವಿ ಹಾಗೂ ಬನಹಟ್ಟಿ ನಗರಗಳಲ್ಲಿ ನೂತನ ಬಸ್ ನಿಲ್ದಾಣಗಳ ಕಾಮಗಾರಿಯು ಅಂತಿಮ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

(ಇ) ಮೂಲಭೂತ ಸೌಕರ್ಯ ಕಲ್ಪಿಸಲು ಸುಮಾರು ೫೦–೬೦ ಲಕ್ಷ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು)

## ವಿದ್ಯಾರ್ಥಿ ನಿಲಯಗಳು

**ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) –**

೯ (೫೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯವ್ಯಾಪಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ; ಈ ಪೈಕಿ ಸ್ವಂತ ಕಟ್ಟಡ ಹೊಂದಿರುವ ಮತ್ತು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)

## ಬೈಪಾಸ್ ರಸ್ತೆಯ ನಿರ್ಮಾಣ

**ಶ್ರೀ ಶರಣಗೌಡ ಕಂದಕೂರ್ (ಗುರ್‌ಮಿಠ್‌ಕಲ್) –**

೧೦ (೩೦೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಯಾದಗಿರಿ ಜಿಲ್ಲೆಯ ಗುರುಮಿಠಕಲ್ ಪಟ್ಟಣವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ಈ ಪಟ್ಟಣದಲ್ಲಿ ಬೃಹತ್ ಪ್ರಮಾಣದಲ್ಲಿ ವಾಹನಗಳ

ಓಡಾಟದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ ಈ ಪಟ್ಟಣಕ್ಕೆ ಹೊಂದಿಕೊಂಡಂತೆ ಬೈಪಾಸ್ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಬೈಪಾಸ್ ರಸ್ತೆಯನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಈ ಬೈಪಾಸ್ ರಸ್ತೆಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆಯೇ ; (ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ಬೈಪಾಸ್ ರಸ್ತೆಯನ್ನು ನಿರ್ಮಿಸಲು ನಿಗದಿಪಡಿಸಿರುವ ಅಂದಾಜು ಮೊತ್ತವೆಷ್ಟು; ಯಾವ ಕಾಲಮಿತಿಯಲ್ಲಿ ಈ ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

## ಖಾಲಿ ಇರುವ ಹುದ್ದೆಗಳ ಭರ್ತಿ

**ಶ್ರೀ ಕಿರಣ್ ಕುಮಾರ್ ಕೊಡ್ಗಿ ಎ (ಕುಂದಾಪುರ) –**

೧೧ (೯೭೨) ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉಡುಪಿ ಜಿಲ್ಲೆಯಲ್ಲಿನ ಪಶು ಸಂಗೋಪನಾ ಇಲಾಖೆಗೆ ಮಂಜೂರಾದ ಮತ್ತು ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶು ಆಸ್ಪತ್ರೆ/ ಪಶು ಚಿಕಿತ್ಸಾಲಯ/ಪ್ರಾಥಮಿಕ ಪಶು ಚಿಕಿತ್ಸಾಲಯಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಆಸ್ಪತ್ರೆವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಈ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯು ಹೆಚ್ಚು ಗ್ರಾಮೀಣ ಭಾಗವಾಗಿದ್ದು, ಈ ಭಾಗದಲ್ಲಿ ಹೈನುಗಾರಿಕೆಯನ್ನೇ ಜೀವನಾಧಾರವನ್ನಾಗಿಸಿಕೊಂಡಿರುವ ರೈತರ ಅನುಕೂಲಕ್ಕಾಗಿ ಪಶು ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರೈತರುಗಳ ಜಮೀನುಗಳಿಗೆ ಪೋಡಿ ಮತ್ತು ಹದ್ದುಬಸ್ತು ಮಾಡಿಸುವುದು

**ಶ್ರೀ ಸಮೃದ್ಧಿ ವಿ ಮಂಜುನಾಥ್ (ಮುಳಬಾಗಿಲು) –**

೧೨ (೨೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಕಂದಾಯ ಗ್ರಾಮಗಳ ಡೀಟೈಲ್ ಸರ್ವೇ ಕಾರ್ಯವು ೧೯೬೪–೬೫ರಲ್ಲಿ ಪೂರ್ಣಗೊಂಡಿದ್ದು, ಅವುಗಳ ಪೈಕಿ ಜೋಡಿ ಇನಾಂ ಗ್ರಾಮಗಳಾದ ದೇವರಾಯ ಸಮುದ್ರ ಹಾಗೂ ಇತರೆ ಗ್ರಾಮಗಳು ಮತ್ತು ಕಾಯಂಗುತ್ತಾ ಗ್ರಾಮಗಳಾದ ಹೊಸಗಾನಹಳ್ಳಿ ಹಾಗೂ ಇತರೆ ಗ್ರಾಮಗಳು ಹಾಗೂ ಸರ್ವೇ ಇನಾಂ ಗ್ರಾಮಗಳಾದ ಇನಾಂ ನಾಗಮಂಗಲ ಹಾಗೂ ಮತ್ತಿತರೆ ಗ್ರಾಮಗಳಲ್ಲಿ ಇಂದಿನವರೆಗೆ ಡೀಟೈಲ್ ಸರ್ವೇಯಂತೆ ಪಹಣಿ ಇಂಡೀಕರಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಂದಾಯ ದಾಖಲೆಯಾದ ಆರ್.ಟಿ.ಸಿ.ಯಲ್ಲಿ ಕಂಡುಬರುವ ಸರ್ವೇ ನಂಬರ್‌ಗಳಿಗೂ ಆಕಾರಬಂದಿನಲ್ಲಿ ದಾಖಲಾಗಿರುವ ಸರ್ವೇ ನಂಬರ್‌ಗಳಿಗೂ ಒಂದಕ್ಕೊಂದು ತಾಳೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಭೂ ರಹಿತ ಬಡವರಿಗೆ ಉಳುವವನೇ ಭೂಮಿಯ ಒಡೆಯ ಕಾಯ್ದೆಯಡಿ ಭೂಮಿಯನ್ನು ಪಡೆದ ರೈತರುಗಳ ಜಮೀನುಗಳಿಗೆ

ಕ್ರಯ, ವಿಭಾಗ, ಕಾರ್ಯಗಳಾಗದೇ ಪೋಡಿ ಮತ್ತು ಹದ್ದುಬಸ್ತು ಇನ್ನಿತರೆ ವಹಿವಾಟುಗಳು ಮಾಡಲು ಸಾಧ್ಯವಾಗದಿರುವುದರಿಂದ ರೈತರುಗಳಿಗೆ ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಹಾಗಿದ್ದಲ್ಲಿ, ಈ ಜೋಡಿ ಗ್ರಾಮಗಳ ಹಳೆಯ ಸರ್ವೇ ನಂಬರ್‌ಗಳಿಗೆ ಹೊಸ ಸರ್ವೇ ನಂಬರ್‌ಗಳನ್ನು ತಾಳೆ ಮಾಡಲು ಹಲವು ದಾಖಲೆಗಳು ಅಪೂರ್ಣವಾಗಿದ್ದು, ಈ ಎಲ್ಲಾ ಜೋಡಿ ಗ್ರಾಮಗಳ ಪಹಣಿ ಹಾಗೂ ಆಕಾರಬಂದ್ ತಾಳೆ ಮಾಡಲು ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿ ಒಂದು ವಿಶೇಷ ತಂಡ ಮಾಡುವ ಮೂಲಕ ಮುಳಬಾಗಿಲು ತಾಲ್ಲೂಕಿನ ರೈತರುಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ;

(ಉ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರ ಕ್ರಮ ಕೈಗೊಳ್ಳುವುದು ? (ಮಾಹಿತಿ ನೀಡುವುದು)

## ಬಸ್ ಸೌಲಭ್ಯ ಒದಗಿಸುವುದು

**ಶ್ರೀ ಮಾನಪ್ಪ ಡಿ ವಜ್ಜಲ್ (ಲಿಂಗಸುಗೂರು) –**

೧೩ (೨೫೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಸಾರ್ವಜನಿಕರು ರಾಜ್ಯದಾದ್ಯಂತ ಸಕಾಲದಲ್ಲಿ ಪ್ರಯಾಣಿಸಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ತಾಲ್ಲೂಕಿನ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಸಕಾಲದಲ್ಲಿ ಬಸ್ಸಿನಲ್ಲಿ ಪ್ರಯಾಣಿಸಲು ಅನುಕೂಲವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ನೀಡುವುದು)

(ಇ) ಪ್ರಯಾಣಿಕರ ಅನುಕೂಲಕ್ಕಾಗಿ ಹೊಸ ಬಸ್‌ಗಳನ್ನು ಖರೀದಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಪ್ರಸಕ್ತ ಸಾಲಿನಲ್ಲಿ ಎಷ್ಟು ಬಸ್‌ಗಳನ್ನು ಖರೀದಿಸಲು ಕ್ರಮ ಕೈಗೊಂಡಿದೆ ; (ಪೂರ್ಣ ವಿವರ ನೀಡುವುದು)

(ಈ) ಲಿಂಗಸುಗೂರು ತಾಲ್ಲೂಕಿನ ಘಟಕಕ್ಕೆ ಎಷ್ಟು ಹೊಸ ಬಸ್‌ಗಳನ್ನು ಮಂಜೂರು ಮಾಡಲಾಗಿದೆ ; ಕಲ್ಯಾಣರಥ ಹವಾನಿಯಂತ್ರಿತ ಬಸ್‌ಗಳನ್ನು ಈ ಘಟಕಕ್ಕೆ ಮಂಜೂರು ಮಾಡದೇ ಇರಲು ಕಾರಣಗಳೇನು ; ಹಾಗಿದ್ದಲ್ಲಿ, ಹೊಸ ಬಸ್‌ಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಸ್ತೆಗಳ ಸುಧಾರಣೆ

**ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) –**

೧೪ (೮೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಿಜಯಪುರ ಜಿಲ್ಲೆಯ ಇಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ರೀತಿಯ ಲೋಕೋಪಯೋಗಿ ರಸ್ತೆಗಳು ಯಾವುವು ; ಅವುಗಳ ಉದ್ದ ಎಷ್ಟು ; (ವಿವರ ನೀಡುವುದು)

(ಆ) ಸದರಿ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಸಾರ್ವಜನಿಕ ಸುಗಮ ಸಂಚಾರಕ್ಕೆ ತೀವ್ರ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಆ ರಸ್ತೆಗಳು ಯಾವುವು ; ಎಷ್ಟು ವರ್ಷಗಳಿಂದ ಈ ರಸ್ತೆಗಳ ಸುಧಾರಣೆ ಕಾಮಗಾರಿ ಕೈಗೊಂಡಿರುವುದಿಲ್ಲ ; (ವಿವರ ನೀಡುವುದು)

(ಇ) ಸದರಿ ರಸ್ತೆಗಳ ಸುಧಾರಣೆಗೆ ಬೇಕಾಗುವ ಅನುದಾನ ಎಷ್ಟು ; ಸದರಿ ಅನುದಾನವನ್ನು ಯಾವಾಗ ಮಂಜೂರು ಮಾಡಲಾಗುವುದು ;

(ಈ) ಸದರಿ ಎಲ್ಲಾ ರಸ್ತೆಗಳ ಸುಧಾರಣೆ ಕಾಮಗಾರಿ ಕೈಗೊಳ್ಳಲು ಸರ್ಕಾರ ಆಸಕ್ತಿ ಹೊಂದಿದೆಯೇ ; ಹೊಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ರಸ್ತೆಗಳನ್ನು ಸುಧಾರಣೆ ಮಾಡಲಾಗುವುದು ; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

## ಪಶು ಆಸ್ಪತ್ರೆಗಳಿಗೆ ಔಷಧ ಪೂರೈಕೆ

**ಶ್ರೀ ಶ್ರೀನಿವಾಸ ಜಿ ಹೆಚ್ (ತರೀಕೆರೆ) –**

೧೫ (೧೯೬) ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪಶು ವೈದ್ಯಕೀಯ ಇಲಾಖೆಯಡಿಯಲ್ಲಿನ ಗ್ರಾಮೀಣ ಭಾಗದ ಪಶು ಚಿಕಿತ್ಸಾಲಯಗಳಲ್ಲಿ ಜಾನುವಾರುಗಳಿಗೆ ಅಗತ್ಯವಾದಲ್ಲಿ ಚಿಕಿತ್ಸೆಗೆ ಬೇಕಾದ ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಔಷಧಗಳ ಕೊರತೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಗ್ರಾಮೀಣ ಪ್ರದೇಶದ ಪಶು ಚಿಕಿತ್ಸಾಲಯಗಳಿಗೆ ಬೇಡಿಕೆಗಳಿಗನುಗುಣವಾಗಿ ಔಷಧಗಳನ್ನು ಪೂರೈಸಲು ಸರ್ಕಾರಕ್ಕೆ ಇರುವ ಅಡೆ–ತಡೆಗಳೇನು?

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ. 212– ಪಿ2

**List of Questions**
**for Oral Answers**

**Total No. of**
**Questions - 15**

# LIST - 01

# KARNATAKA LEGISLATIVE ASSEMBLY

## SIXTEENTH ASSEMBLY

## FOURTH SESSION

## Monday, 15th July, 2024

---

### GROUP - A

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries, Ports and Inland Water Transport

---

### SETTING UP OF SURVEY SETTLEMENT AND LAND RECORDS OFFICE

**SRI BABASAHEB PATIL (KITTUR) -**

01 (50) Will the Minister for Revenue be pleased to state:-

a) the time by when the office of survey settlement and land records office would be set up at Chennamana-Kittur; the reasons for delay to start this office;

b) the number of posts sanctioned to this office during the last 03 years; the number of staff working; the reasons for transfer of posts sanctioned in 2016 to another place by the Government?

## PROVIDING NEW BUSES

**SRI KOUJALAGI MAHANTHESH SHIVANAND (BAILHONGAL)-**

02 (69) Will the Minister for Transport and Muzrai be pleased to state:-

a) the total number of buses are there in Bailhongal bus depot of Belagavi Division of Northwest Karnataka Road Transport Corporation;

b) according to Government norms a bus would be considered inactive if it operated for how many K.M.;

c) the number of buses are not in working condition after operating more K.M. than the norms in Bailhongal bus depot;

d) whether it has come to the notice of the Government that the public is facing difficulties due to the breakdown of buses in the midway as operating inefficient vehicles by this depot;

e) if so, whether the steps would be taken to replace the vehicles broke down in Bailhongal bus depot and provide new vehicle immediately?

## QUARTERS

**SRI DARSHAN DHRUVANARAYANA (NANJANAGUD) -**

03 (77) Will the Minister for Public Works be pleased to state:-

a) whether the Government has noticed that the quarters of the public works department at Hullahalli village of Nanjanagud Assembly Constituency are in dilapidated condition; if so, the number of houses are in dilapidated condition; whether they would be repaired or demolished and built a new one; (information be furnished)

b) if the said quarters are not repaired or newly constructed, reasons there for;

c) the stance of the Government to demolish the said quarters and handover the land to other departments for office building in Hullahalli village, if the said quarters cannot be repaired or constructed a new one? (information be furnished)

## PROMOTING TO FISHERIES

**SRI BHARAMAGOUDA ALAGOUDA KAGE (KAGAWAD) -**

04 (199) Will the Minister for Fisheries, Ports and Inland Water Transport be pleased to state:-

a) krishna river is flowing in Kagavada Assembly Constituency of Belagavi district, the particulars of schemes that have been chalked out by the Government to encourage fisheries;

b) the number of houses have been allotted by the Government for the livelihood of fishermen;

c) the particulars of equipments and incentives provided to the fishermen for the last 03 years? (details be furnished)

## ILLEGAL ENCROACHMENT OF LANDS

**SRI MUNIRATHNA (RAJARAJESHWARI NAGARA) -**

05 (211) Will the Minister for Housing, Wakf and Minority Welfare be pleased to state:-

a) whether it has come to the notice of the Government that the land of slum board in Sy. No. 8/1, 9/1, 9/2, 9/4, 11 and 12 of Laggere village in Yeshwanthpur hobli coming in the limits of Rajarajeshwari Nagar Assembly Constituency has been encroached illegally by private persons; (slum area-wise complete details be furnished)

b) the action taken by the Government to reclaim this land illegally encroached upon back to the board;

c) the action taken by the Government against private persons who have illegally encroached upon the land and the officers who have colluded in the encroachment?

## SHORTAGE OF LAND SURVEYORS

**SRI AIHOLE DURYODHAN MAHALINGAPPA (RAYBAG) -**

06 (54) Will the Minister for Revenue be pleased to state:-

a) whether it has come to the notice of the Government that there is a shortage of land surveyors in the department of land records and settlement of survey covered by the revenue department of the state;

b) if so, the steps taken by the Government for recruitment of land surveyors so far as the public are suffering due to the shortage of surveyors;

c) the time limit within which the Government would take steps for recruitment of land surveyors; if so, the number of land surveyors would be recruited by the Government;

d) if not, the constraints to the Government for recruitment of land surveyors to mitigate the problems being faced by the farmers and public due to shortage of land surveyors? (complete details be furnished)

## COMPENSATION

**SRI ASHOK KUMAR RAI (PUTTUR) -**

07 (82) Will the Minister for Public Works be pleased to state :-

a) whether it has come to the notice of the Government that the compensation has not been given to the land owners who's land has been acquired for construction of road by the public work department; if so, the time by when the compensation would be given;

b) the number of such cases are reported in the limits of Puttur assembly constituency? (complete details be furnished)

## RELEASING THE GRANT

**SRI SIDDU SAVADI (TERDAL) -**

08 (90) Will the Minister for Transport and Muzrai be pleased to state:-

a) whether it has come to the notice of the Government that the construction work for new bus stations is at its final stage in Rabakavi and Banahatti city coming under the limits of Terdal assembly constituency; if so, whether it has come to the notice of the Government that there is no basic facilities in the said bus stations;

b) if so, the steps taken by the Government to provide the basic facilities; (details be furnished)

c) whether the Government would take action to release the grant of Rs. 50-60 lakhs to provide basic facilities? (details be furnished)

**HOSTELS**

**SRI TANVEER SAIT (NARASIMHARAJA) -**

09 (51) Will the Minister for Housing, Wakf and Minority Welfare be pleased to state :-

a) the total number of hostels are functioning under the jurisdiction of Minority welfare department across the State; out of it, the number of hostels are functioning in own building and rented building; (district-wise details be furnished)

b) whether it has come to the notice of the Government that there is a lack of basic facilities in the hostels, which have their own buildings;

c) if so, the steps taken by the Government for construction of own buildings and providing basic facilities for these hostels; if not, the reasons there for? (details be furnished)

**CONSTRUCTION OF BY-PASS ROAD**

**SRI SHARANAGOUDA KANDAKUR (GURMITKAL) -**

10 (300) Will the Minister for Public Works be pleased to state:-

a) the Gurmitkal town of Yadagiri district is growing massively, whether it has come to the notice of the Government that the proposal has been submitted to the Government for construction of by-bass road adjacent to this city because the public are facing problem due to heavy vehicular movement in this town;

b) if so, the steps taken by the Government for construction of this by-pass road;

c) whether the detailed project report has been prepared for construction of this by-pass road; (details be furnished)

d) if so, the estimated amount fixed for construction of by-pass road; the time limit within which this road construction work would be completed? (details be furnished)

**FILLING UP OF VACANT POSTS**

**SRI KIRAN KUMAR KODGI A. (KUNDAPURA) -**

11 (292) Will the Minister for Animal husbandry and Sericulture be pleased to state :-

a) the number of posts sanctioned, fill up and vacant in the Animal husbandry department in Udupi district; (post wise-taluk wise complete information be furnished);

b) whether it has come to the notice of the Government that there is a shortage of doctors and staff in veterinary hospital/veterinary clinic/primary veterinary clinics within the limits of Kundapura assembly constituency;

c) if so, the number of doctors and staff are working in the hospitals/clinics; (hospital-wise complete information be furnished)

d) the said assembly constituency has a rural background, the steps taken by the Government to overcome the shortage of veterinary doctors and staff for the benefit of the farmers who's livelihood is based on dairy farming?

**PODI AND SETTLEMENT OF FARMERS LAND**

**SRI SAMRUDDHI V. MANJUNATH (MULBAGAL) -**

12 (220) Will the Minister for Revenue be pleased to state:-

a) whether it has come to the notice of the Government that the detailed survey work of the revenue villages of Mulbagal taluk of Kolar district was completed in 1964-65, among them, RTC has not been updated as per detailed survey in Jodi Inam villages such as Devaraya Samudra and other villages and Kayamgutta villages like Hosganahalli and other villages and the survey inam villages like Nagamanla and other villages;

b) whether it has come to the notice of the Government that survey numbers appearing in the RTC which is a revenue record do not tally with the survey numbers recorded in the Akaraband ;

c) if so, whether it has come to the notice of the Government that these landless poor are not able to do any transactions like sale, partition, podi and settlement etc., on their lands which were acquired under the tenancy act, due to this, they are facing inconvenience;

d) if so, whether the Government would take action to facilitate the farmers by formulating a special action plan and setting up a special team to make a tally of RTC and Akaraband of all jodi villages of Mulbagal taluk, as so many documents do not tally with the old survey numbers of Jodi villages;

e) if so, the time limit within which the Government will take action? (information be furnished)

**PROVIDING THE BUS FACILITY**

**SRI MANAPPA D. VAJJAL (LINGSUGUR) -**

13 (257) Will the Minister for Transport and Muzrai be pleased to state :-

a) whether it has come to the notice of the Government that there is a lack of bus facilities to travel public in Lingsugur taluk of Raichur district on time across the State;

b) the steps taken by the Government to provide bus facilities for the public and passengers of said taluk; (complete details be furnished)

c) whether the Government has taken steps to purchase new buses for the convenience of the passengers; the number of buses would be purchased in the current year; (complete details be furnished)

d) the total number of new buses have been allocated for the Lingsugur taluk depot; the reasons for not allocating Kalyanaratha AC buses to said depot; if so, the steps taken by the Government to allocate new buses?

**DEVELOPMENT OF ROADS**

**SRI YASHVANTHARAYGOUDA VITTALAGOUDA PATIL (INDI) -**

14(85) Will the Minister for Public Works be pleased to state:-

a) the various types of Public works department roads coming in the limits of Indi assembly constituency of

Vijayapura district; the total length of said roads; (details be furnished)

b) whether it has come to the notice of the Government that said roads are completely deteriorated and causing severe problem for the smooth flow of public transits; if so, particulars of the roads; number of years since this road development work has not taken up; (details be furnished)

c) the quantum of grant required for the development of said roads; the time by when said grant will be sanctioned;

d) whether the Government has interested to carry out the development works of all these roads; if so, the time limit within which said roads would be developed; the steps taken by the Government for development of said roads? (details be furnished)

**SUPPLY OF MEDICINES TO VETERINARY HOSPITALS**

**SRI SRINIVASA G.H. (TARIKERE)-**

15 (196) Will the Minister for Animal husbandry and Sericulture be pleased to state:-

a) whether it has come to the notice of the Government that there is a shortage of medicines to be required for the treatment of live-stock in rural veterinary hospitals of the veterinary department;

b) if so, the steps taken by the Government to mitigate the shortage of medicines;

c) the obstacles for the Government to supply medicines to the veterinary hospitals in rural area according to their demands?

**M.K. Vishalakshi**
Secretary
Karnataka Legislative Assembly

Government Press, Vikasa Soudha Unit, Bengaluru, WD-218 Copies